## ನಮ್ಮ ಬಗ್ಗೆ ಹೇಳುವುದಾದರೆ.

ನಾವು ಅಭಿವೃದ್ಧೀಶೀಲ ದೇಶಗಳಲ್ಲಿನ ಕಿವುಡು ಮಕ್ಕಳಿಗಾಗಿ ಕೆಲಸ ಮಾಡುವ ಯುನೈಟೆಡ್ ಕಿಂಗ್‌ಡಮ್‌ನ ಧರ್ಮಾರ್ಥ ಸಂಸ್ಥೆ. ಕಿವುಡು ಮಕ್ಕಳು ಮತ್ತು ಕಿಶೋರರು ಅಭಿವೃದ್ಧಿಶೀಲ ದೇಶಗಳಲ್ಲಿ ಎದುರಿಸುವ ಅಡೆತಡೆಗಳನ್ನು ತೆಗೆದುಹಾಕುವ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತೇವೆ. ಕಿವುಡು ಮಕ್ಕಳು ಮತ್ತು ಕಿಶೋರರು ತಮ್ಮ ಕುಟುಂಬಗಳಲ್ಲಿ, ಶಿಕ್ಷಣ ಮತ್ತು ಸಾಮುದಾಯಿಕ ಜೀವನದಲ್ಲಿ ಸಂಪೂರ್ಣವಾಗಿ ಒಳಗೊಳ್ಳುವದಕ್ಕೆ ಅನುವು ಮಾಡಿಕೊಡುವ ಕೆಲಸವನ್ನು ಸುಗಮಗೊಳಿಸುತ್ತ, ದಕ್ಷಿಣ ಏಷ್ಯಾ, ಪೂರ್ವ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾಗಳಲ್ಲಿನ ನಮ್ಮ ಸಹಭಾಗಿ ಸಂಸ್ಥೆಗಳೊಂದಿಗೆ 15 ವರ್ಷಗಳಿಗೂ ಹೆಚ್ಚಿನ ಸಮಯದಿಂದ ನಾವು ಕೆಲಸ ಮಾಡುತ್ತಿದ್ದೇವೆ.

ಡೆಫ್ ಚೈಲ್ಡ್ ವರ್ಲ್ಡ್‌ವೈಡ್
ಗ್ರೌಂಡ್ ಫ್ಲೋರ್ ಸೌತ್, ಕ್ಯಾಸಲ್ ಹೌಸ್
37-45 ಪಾಲ್ ಸ್ಟ್ರೀಟ್, ಲಂಡನ್ EC2A 4LS

**info@deafchildworldwide.org**

**www.deafchildworldwide.org**

ಡೆಫ್ ಚೈಲ್ಡ್ ವರ್ಲ್ಡ್‌ವೈಡ್ – ಇದು ನ್ಯಾಷನಲ್ ಡೆಫ್ ಚಿಲ್ಡ್ರನ್ಸ್ ಸೊಸೈಟಿಯ ಅಂತಾರಾಷ್ಟ್ರೀಯ ಅಂಗಸಂಸ್ಥೆಯಾಗಿರುತ್ತದೆ. ನ್ಯಾಷನಲ್ ಡೆಫ್ ಚಿಲ್ಡ್ರನ್ಸ್ ಸೊಸೈಟಿಯು ಇಂಗ್ಲೆಂಡ್ ಮತ್ತು ವೇಲ್ಸ್ (1016532) ಮತ್ತು ಸ್ಕಾಟ್ಲೆಂಡ್ (SC040779. JR1430) ನಲ್ಲಿನ ನೋಂದಾಯಿತ ಧರ್ಮಾರ್ಥ ಸಂಸ್ಥೆಯಾಗಿರುತ್ತದೆ.

# ಗ್ಲೂ ಇಯರ್ ಅಥವಾ ಸೋರುಗಿವಿ



ಪೋಷಕರ ಕೈಪಿಡಿ



www.deafchildworldwide.org

ನಮ್ಮ ಧ್ಯೇಯ
ಪ್ರತಿಯೊಂದು ಕಿವುಡು ಮಗುವಿಗೂ
ಅಡೆತಡೆಗಳಿಲ್ಲದ ಒಂದು ಜಗತ್ತು

# ಪರಿವಿಡಿ


1. ಪರಿಚಯ 5
2. ಗ್ಲೂ ಇಯರ್ ಅಥವಾ ಸೋರುಗಿವಿ ಎಂದರೇನು? 6
3. ಗ್ಲೂ ಇಯರ್ ಅಥವಾ ಸೋರುಗಿವಿ ಉಂಟಾಗಲು ಕಾರಣಗಳೇನು; ಮತ್ತು ಅದನ್ನು ತಡೆಗಟ್ಟುವುದು ಹೇಗೆ? 8
4. ನನ್ನ ಮಗುವಿಗೆ ಗ್ಲೂಇಯರ್ ಅಥವಾ ಸೋರುಗಿವಿ ಇದೆಯೆ? 11
5. ಇದಕ್ಕೆ ಎಂತಹ ಚಿಕಿತ್ಸೆಗಳು ಲಭ್ಯವಿವೆ? 12
6. ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಏನಾಗುತ್ತದೆ? 15
7. ಗ್ರಾಮೆಟ್ಸ್ 16
8. ಓಟೋವೆಂಟ್ 18
9. ಶ್ರವಣ ಸಾಧನಗಳು 19
10. ನನ್ನ ಮಗುವಿಗೆ ಸುಲಭವಾಗಿ ಕಿವಿ ಕೇಳಿಸುವಂತಾಗಲು ನಾನೇನು ಮಾಡಬೇಕು? 22


! ಎಲ್ಲಾ ರೀತಿಯ ಕಿವುಡುತನಕ್ಕೆ – ಅದು ಮಂದಗಿವಿ ಇರಬಹುದು ಅಥವಾ ತೀವ್ರಕಿವುಡು ಇರಬಹುದು – ನಾವು “ಕಿವುಡು” ಎಂಬ ಪದವನ್ನು ಉಪಯೋಗಿಸುತ್ತೇವೆ. ಇದು ಒಂದು ಕಿವಿ ಕೇಳಿಸದಿರುವುದು ಅಥವಾ ಗ್ಲೂ ಇಯರ್ ಅಥವಾ ಸೋರುಗಿವಿಯಂತಹ ಪರಿಸ್ಥಿತಿಯಿಂದ ಉಂಟಾಗುವ ತಾತ್ಕಾಲಿಕ ಕಿವುಡುತನವನ್ನು ಒಳಗೊಂಡಿರುತ್ತದೆ.
ಎಲ್ಲಾ ತಂದೆತಾಯಂದಿರಿಗೂ ಮತ್ತು ಮಗುವನ್ನು ನೋಡಿಕೊಳ್ಳುವವರಿಗೂ ನಾವು “ಪೋಷಕರು” ಎಂಬ ಪದವನ್ನು ಬಳಸುತ್ತೇವೆ.









# 1 ಪರಿಚಯ

ಗ್ಲೂ ಇಯರ್ ಎಂದರೆ ಸೋರುಗಿವಿ. ಇದು ಬಾಲ್ಯದಲ್ಲಿ ಕಂಡುಬರುವ ಅತ್ಯಂತ ಸಾಮಾನ್ಯ ಕಾಯಿಲೆಗಳಲ್ಲಿ ಒಂದು.

ಪೂರ್ವ ಆಫ್ರಿಕಾ ಮತ್ತು ದಕ್ಷಿಣ ಏಷ್ಯಾಗಳ ಶಾಲಾ ಮಕ್ಕಳ ಪೈಕಿ ಶೇ.10ರಿಂದ 20 ಮಕ್ಕಳನ್ನು ಇದು ಒಮ್ಮೆಯಾದರೂ ಬಾಧಿಸುತ್ತದೆ. ಸೋರುಗಿವಿಯು ಸ್ವಚ್ಛ ಪರಿಸರಕ್ಕಿಂತ ಕೊಳೆಗೇರಿಗಳಲ್ಲಿ ಸಾಮಾನ್ಯ. ಐದು ವರ್ಷದ ಒಳಗಿನ ಮಕ್ಕಳು ಸಾಮಾನ್ಯವಾಗಿ ಇದಕ್ಕೆ ಒಳಗಾಗುತ್ತಾರೆ.

ಸೋರುಗಿವಿ ಸಾಮಾನ್ಯವಾಗಿ ತಾತ್ಕಾಲಿಕವಾದದ್ದು. ಆದರೂ ಕೆಲಮಕ್ಕಳಲ್ಲಿ ಹದಿಹರೆಯದವರೆಗೂ ಮುಂದುವರಿಯಬಹುದು. ಕೆಲವೊಮ್ಮೆ ಸೋರುಗಿವಿಗೂ, ಕಿವಿಗೆ ತಗುಲುವ ಸೊಂಕುಗಳಿಗೂ ಸಂಬಂಧವಿರುತ್ತದೆ.  ಕೆಲವೊಮ್ಮೆ ಇದು ಗಮನಕ್ಕೆ ಬಾರದ ರೀತಿಯಲ್ಲಿ ಉಂಟಾಗಿ ಕಾಡಬಹುದು.

ಸೋರುಗಿವಿ ಎಳೆಯ ಮಕ್ಕಳಲ್ಲಿ ತಾತ್ಕಾಲಿಕವಾಗಿ ಕಿವುಡುತನವನ್ನು ಉಂಟುಮಾಡಬಹುದು ಮತ್ತು ಅವರಿಗೆ ಮಾತು ಬರುವುದು ಸಹ ತಡವಾಗಬಹುದು. ಅದು ಮಕ್ಕಳ ನಡವಳಿಕೆಯ ಮೇಲೂ, ಶಾಲೆಯಲ್ಲಿ ಅವರ ಪ್ರಗತಿಯ ಮೇಲೂ ಪರಿಣಾಮ ಬೀರಬಹುದು.

ಈ ಕೈಪಿಡಿಯು ಸೋರುಗಿವಿ ಎಂದರೇನು, ನಿಮ್ಮ ಮಗುವಿನಲ್ಲಿ ಆ ಸ್ಥಿತಿಯಿದ್ದರೆ, ಅದನ್ನು ಗುರುತಿಸುವುದು ಹೇಗೆ ಮತ್ತು ಒಂದು ವೇಳೆ ಸೋರುಗಿವಿ ಇರುವುದು ಖಚಿತವಾದರೆ ಅದಕ್ಕೆ ಏನು ಮಾಡಬೇಕು ಎಂಬ ಬಗ್ಗೆ ಮಾಹಿತಿಯನ್ನು  ಒದಗಿಸುತ್ತದೆ.



# 2 ಗ್ಲೂ ಇಯರ್ ಅಥವಾ ಸೋರುಗಿವಿ ಎಂದರೇನು?

ಮಧ್ಯದ ಕಿವಿ ಅಥವಾ ನಡುಗಿವಿಯಲ್ಲಿ (ಕಿವಿಯ ತಮಟೆಯ ಹಿಂಭಾಗ) ಒಂದು ರೀತಿಯ ಅಂಟು ದ್ರವ ತುಂಬಿಕೊಂಡಾಗ, ಗ್ಲೂ ಇಯರ್ ಅಥವಾ ಸೋರುಗಿವಿ ಆಗುತ್ತದೆ.


ಕಿವಿಗಳು ಸರಿಯಾಗಿ ಕೆಲಸ ಮಾಡಬೇಕೆಂದರೆ, ನಡುಗಿವಿಯಲ್ಲಿ ಗಾಳಿ ತುಂಬಿಕೊಂಡಿರಬೇಕು. ಈ ಗಾಳಿ ಗಂಟಲಿನ ಹಿಂಭಾಗದಿಂದ ನಡುಗಿವಿಗೆ ಸಂಬಂಧ ಕಲ್ಪಿಸುವ ಕರ್ಣನಾಳದ ಮೂಲಕ ಹಾದು ಹೋಗುತ್ತದೆ. ಈ ಕರ್ಣನಾಳವನ್ನು ಯೂಸ್ಟೇಶಿಯನ್ ಟ್ಯೂಬ್ ಎಂದು ಕರೆಯುತ್ತಾರೆ. ಈ ನಾಳದಲ್ಲಿ ತಡೆಯುಂಟಾದರೆ, ಗಾಳಿ ನಾಳದ ಒಳಹೋಗುವುದಿಲ್ಲ. ಹೀಗಾದಾಗ, ನಡುಗಿವಿಯ ಒಳಪದರದಲ್ಲಿನ ಕೋಶಗಳು ಒಂದು ದ್ರವವನ್ನು ಉತ್ಪಾದಿಸಲು ಆರಂಭಿಸುತ್ತವೆ. ಇದೊಂದು ರೀತಿಯ ಹರಿಯುವ ದ್ರಾವಕವಾಗಿದ್ದು, ಆ ಜಾಗದಲ್ಲಿ ತುಂಬಿಕೊಳ್ಳುತ್ತ ಹೋದಂತೆ ಹೆಚ್ಚು ಮಂದವೂ, ಅಂಟಂಟೂ ಆಗುತ್ತದೆ. ಮಕ್ಕಳಲ್ಲಿರುವ ಕರ್ಣನಾಳವು ದೊಡ್ಡವರಲ್ಲಿರುವಂತೆ ಉದ್ದಕ್ಕೆ ಅಥವಾ ಅಗಲಕ್ಕೆ ಇರುವುದಿಲ್ಲ. ಈ ಕಾರಣದಿಂದ ನಡುಗಿವಿಯಲ್ಲಿನ ದ್ರವವು ಸುಲಭವಾಗಿ ಬರಿದಾಗುವುದಿಲ್ಲ.

ಯಾವಾಗ ನಡುಗಿವಿಯಲ್ಲಿ ತುಂಬಿಕೊಳ್ಳುವ ದ್ರವವು ತಡೆ ಉಂಟು ಮಾಡುತ್ತದೋ, ನಡುಗಿವಿಯ ಮೂಲಕ ಶಬ್ದವು ಒಳಗಿವಿಗೆ ಹಾದುಹೋಗುವುದು ಕಷ್ಟವಾಗುತ್ತದೆ. ಹೀಗಾಗಿ ಸಣ್ಣ ಶಬ್ದಗಳು ಕೇಳಿಸುವುದೇ ಕಷ್ಟವಾಗುತ್ತದೆ. ಬೆರಳುಗಳನ್ನು ಕಿವಿಯೊಳಗೆ ತೂರಿಸಿಕೊಂಡು ಕೇಳಿಸಿಕೊಳ್ಳುವುದು ಹೇಗಿರುತ್ತದೋ, ಹಾಗಿರುತ್ತದೆ ಆ ಪರಿಸ್ಥಿತಿ. ಆದ್ದರಿಂದ, ಮಗು ಯಾವಾಗಲೂ ನೀವು ಹೇಳಿದ್ದನ್ನೆಲ್ಲಾ ಕೇಳಿಸಿಕೊಳ್ಳದಿರಬಹುದು – ಗಮನವಿರಲಿ.










ಸಾಮಾನ್ಯ ಕಿವಿ



ಸೋರುಗಿವಿ ಬಾಧಿತ ಕಿವಿ

ನೀವು ಕಿವಿ ಹೇಗೆ ಕೆಲಸ ಮಾಡುತ್ತದೆ ಮತ್ತು ಸೋರುಗಿವಿಯ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕೆಂದರೆ, ನಮ್ಮ ವೆಬ್‌ಸೈಟಿಗೆ ಹೋಗಿ, glue ear ಎಂದು ಟೈಪ್ ಮಾಡಿ, ಹುಡುಕಿ.
**www.ndcs.org.uk/family_support/glossary**





## 3 ಗ್ಲೂ ಇಯರ್ ಅಥವಾ ಸೋರುಗಿವಿ ಉಂಟಾಗಲು ಕಾರಣಗಳೇನು? ಮತ್ತು ಅದನ್ನು ತಡೆಗಟ್ಟುವುದು ಹೇಗೆ?

ಸೋರುಗಿವಿಗೆ ಅನೇಕ ಬೇರೆ ಬೇರೆ ಅಂಶಗಳು ಕಾರಣವಾಗುತ್ತವೆ. ಅವು ಯಾವುವೆಂದರೆ ಶೀತ–ನೆಗಡಿ, ಫ್ಲೂ, ಅಲರ್ಜಿಗಳು, ಮಾಲಿನ್ಯ, ಪರೋಕ್ಷ ಸಿಗರೇಟ್/ಬೀಡಿ ಸೇವನೆ ಅಥವಾ ಕೊಳಚೆನೀರಿನಲ್ಲಿ ಸ್ನಾನ ಮಾಡುವುದು ಮತ್ತು ಈಜುವುದು. ಸೋರುಗಿವಿಗೂ ಕಿವಿಯ ಸೋಂಕುಗಳಿಗೂ ಸಾಮಾನ್ಯವಾಗಿ ಸಂಬಂಧವಿರುತ್ತದೆ, ಆದರೆ ಯಾವಾಗಲೂ ಅಲ್ಲ.

ಸೀಳುತುಟಿ ಇರುವ ಮಕ್ಕಳು ಅಥವಾ ಡೌನ್ಸ್ ಸಿಂಡ್ರೋಮ್‌ನಂತಹ ಅನುವಂಶಿಕ ಸ್ಥಿತಿ ಸಮಸ್ಯೆಗಳಿರುವ ಮಕ್ಕಳಲ್ಲಿ ಇದು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ – ಏಕೆಂದರೆ ಈ ಮಕ್ಕಳ ಕಿವಿಯ ನಾಳಗಳು (ಯೂಸ್ಟೇಶಿಯನ್ ಟ್ಯೂಬುಗಳು) ಚಿಕ್ಕದಿದ್ದು, ಅವುಗಳ ಕಾರ್ಯಸಾಮರ್ಥ್ಯ ಅವಶ್ಯಕ್ಕಿಂತ ಕಡಿಮೆ ಇರುತ್ತದೆ.

### ಮೊಲೆಹಾಲೂಡಿಸುವಿಕೆ

ಮಕ್ಕಳಲ್ಲಿ ಸೋರುಗಿವಿ ಕಾಣಿಸಿಕೊಳ್ಳುವ ಅಪಾಯಸಾಧ್ಯತೆಯನ್ನು ಮೊಲೆಹಾಲೂಡಿಸುವಿಕೆಯು ತಗ್ಗಿಸಬಹುದು ಎಂದು ಸಂಶೋಧಕರು ಸೂಚಿಸುತ್ತಾರೆ. ಮೊಲೆಹಾಲಿನಲ್ಲಿ ಉರಿಯೂತವನ್ನು ತಡೆಗಟ್ಟುವುದಕ್ಕೆ ಸಹಾಯ ಮಾಡಬಲ್ಲಂತಹ ಪ್ರೋಟೀನುಗಳು ಇವೆ; ಅಲ್ಲದೆ, ಮೊಲೆಹಾಲುಣಿಸುವುದನ್ನು ನಿಲ್ಲಿಸಿದ ಮೇಲೂ ಅದು ಸೋರುಗಿವಿ ಆಗದಿರುವಂತೆ ರಕ್ಷಣೆ ನೋಡುವುದರಲ್ಲಿಯೂ ಸಹಾಯ ಮಾಡುತ್ತದೆ ಎಂದು ಹೇಳಲಾಗುತ್ತದೆ.

ಮಗು ಮಲಗಿಕೊಂಡು ದ್ರವಪದಾರ್ಥವನ್ನು ಕುಡಿದಾಗ, ಸೋರುಗಿವಿ ಉಂಟಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ – ಏಕೆಂದರೆ, ಆ ದ್ರವಪದಾರ್ಥವು ಬಾಯಿಯ ಹಿಂಭಾಗದಲ್ಲಿ ಸೇರಿಕೊಂಡು, ಅದು ಕಿವಿಯ ನಾಳದ ಮೂಲಕ ಕಿವಿ ಒಳಗೆ ಹೋಗಬಹುದು. ಬ್ಯಾಕ್ಟೀರಿಯಾವು ಕಿವಿಯ ನಾಳವನ್ನು ಹೀಗೆ ಹೊಕ್ಕು, ಕಿವಿಯಲ್ಲಿ ಸೋಂಕು ಹಾಗೂ ಸೋರುಗಿವಿಯನ್ನು ಉಂಟುಮಾಡಬಹುದು.



## ಹೊಗೆರಹಿತ ವಾತಾವರಣ

ಸಿಗರೇಟ್ ಅಥವಾ ತಂಬಾಕು ಸೇವನೆಯಿಂದ ಉಂಟಾಗುವ ಹೊಗೆಯ ವಾತಾವರಣದಲ್ಲಿ ಮಕ್ಕಳು ಸಾಮಾನ್ಯವಾಗಿದ್ದರೆ ಅವರಿಗೆ ಕಿವಿಯ ಸೋಂಕುಗಳು ಮತ್ತು ಸೋರುಗಿವಿ ಉಂಟಾಗುವ ಸಾಧ್ಯತೆಗಳು ಹೆಚ್ಚು. ಅಲ್ಲದೆ, ಕೆಲವು ಮನೆಗಳಲ್ಲಿ, ಪೋಷಕರು ಅಡುಗೆ ಮಾಡುವಾಗ, ತಮ್ಮ ಮಕ್ಕಳನ್ನು ಜೊತೆಯಲ್ಲಿಯೇ ಇರಿಸಿಕೊಳ್ಳಬೇಕಾಗುತ್ತದೆ – ಅದು ಬಹಳ ಹೊಗೆತುಂಬಿಕೊಂಡ ಅಡುಗೆಮನೆಯಾಗಿರುತ್ತದೆ. ಸೌದೆ, ಇದ್ದಲು ಮತ್ತು ಎಣ್ಣೆ ಒಲೆಗಳ ಬಳಕೆಯಿಂದ ಉಂಟಾಗುವ ಹೊಗೆಯ ಪರಿಸರದಲ್ಲಿಯೂ ಮಕ್ಕಳು ಇರುತ್ತಾರೆ. ಇದರಿಂದ ಉಸಿರಾಟದ ಪ್ರದೇಶದ ಮೇಲ್ಭಾಗಕ್ಕೆ ಸೋಂಕು ತಗುಲುವ ಸಾಧ್ಯತೆ ಹೆಚ್ಚು. ಉಸಿರಾಟದ ಪಥವು (ಶ್ವಾಸಪಥ) ಸೈನಸ್‌ಗಳು, ಗಂಟಲು, ವಾಯುನಾಳಗಳು ಮತ್ತು ಶ್ವಾಸಕೋಶಗಳನ್ನು ಒಳಗೊಂಡಿರುತ್ತವೆ. ಈ ಸ್ಥಳಗಳಲ್ಲಿ ಸೋಂಕು ತಗುಲಿದರೆ, ಅದು ಕಿವಿಯ ಸೋಂಕಿಗೂ ದಾರಿಯಾಗುತ್ತದೆ.

ಪೋಷಕರು ತಮ್ಮ ಮಕ್ಕಳಿರುವ ಪರಿಸರವನ್ನು ಹೊಗೆಮುಕ್ತವನ್ನಾಗಿ ಮಾಡಲು ಪ್ರಯತ್ನಿಸಬೇಕು. ಒಂದು ವೇಳೆ ಸಂಪೂರ್ಣವಾಗಿ ಹೊಗೆಮುಕ್ತ ಮಾಡುವುದು ಸಾಧ್ಯವಿಲ್ಲವೆಂದರೆ, ಸಾಧ್ಯವಾದಷ್ಟು ಮಟ್ಟಿಗೆ ಅವರನ್ನು ಹೊಗೆ ಪರಿಸರದಿಂದ ದೂರವಿಡಬೇಕು. ಗಾಳಿಯಲ್ಲಿ ಹೊಗೆಯ ಕಣಗಳು ತೇಲಾಡುತ್ತಲೇ ಇರುವುದರಿಂದ, ಸುಮ್ಮನೆ ಕಿಟಕಿಗಳನ್ನು ತೆರೆದಿಡುವುದರಿಂದ ಏನೂ ಪ್ರಯೋಜನವಿಲ್ಲ ಎಂಬುದನ್ನು ನೆನಪಿನಲ್ಲಿಡುವುದು ಮುಖ್ಯ.







## ಅಪೌಷ್ಟಿಕತೆ

ಅಪೌಷ್ಟಿಕತೆಯು ನಿಮ್ಮ ಮಗುವಿನ ತೂಕ ಅವಶ್ಯಕ್ಕಿಂತ ಕಡಿಮೆಯಾಗಲು ಕಾರಣವಾಗುತ್ತದೆ; ಬೆಳವಣಿಗೆ ಕುಂಠಿತವಾಗಲು ಸಹ ಕಾರಣವಾಗುತ್ತದೆ. ಅಲ್ಲದೆ, ಇದು ದೇಹದ ನಿರೋಧಕ ಶಕ್ತಿ ಕಡಿಮೆಯಾಗಲು ಸಹ ಕಾರಣ. ಇದರಿಂದ ಅಪೌಷ್ಟಿಕತೆಯಿಂದ ಬಳಲುವ ಮಕ್ಕಳಿಗೆ ಕಿವಿಯ ಸೋಂಕುರೋಗಗಳು ಮತ್ತು ಸೋರುಗಿವಿ ಉಂಟಾಗುವ ಸಾಧ್ಯತೆ ಅತಿ ಹೆಚ್ಚು.

## ಮನೆಮದ್ದುಗಳು

ಮಗು ಕಿವಿನೋವು ಎಂದಾಗ, ಮನೆಮದ್ದು ಎಂದು ಅದರ ಕಿವಿಗೆ ಎಣ್ಣೆ ಬಿಡುವುದು ಅಥವಾ ಇನ್ನಿತರ ವಸ್ತುಗಳನ್ನು ಹಾಕುವುದರಿಂದ ಕಿವಿಯ ಸೋಂಕು ಮತ್ತು ಇನ್ನಿತರ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಹೆಚ್ಚುತ್ತದೆ. ಆದ್ದರಿಂದ ಅಂತಹ ಮನೆಮದ್ದುಗಳನ್ನು ಮಾಡದಿರಲು ಶಿಫಾರಸು ಮಾಡಲಾಗುತ್ತದೆ.







## 4 ನನ್ನ ಮಗುವಿಗೆ ಗ್ಲೂ ಇಯರ್ ಅಥವಾ ಸೋರುಗಿವಿ ಇದೆಯೆ?

ಈ ಕೆಳಗೆ ಸೋರುಗಿವಿಯ ಸಾಮಾನ್ಯ ಲಕ್ಷಣಗಳನ್ನು ಕೊಡಲಾಗಿದೆ. ನಿಮ್ಮ ಮಗುವಿನಲ್ಲಿ ಇಂತಹ ಲಕ್ಷಣಗಳೇನಾದರೂ ಇವೆಯೆ – ಕಂಡುಹಿಡಿಯಬಲ್ಲಿರಾ?

- ನಡವಳಿಕೆಯಲ್ಲಿ ಬದಲಾವಣೆ
- ಬಹಳ ಆಯಾಸಗೊಳ್ಳುವುದು ಮತ್ತು ಹತಾಶೆ
- ಏಕಾಗ್ರತೆ ಇಲ್ಲದಿರುವುದು
- ಒಂಟಿಯಾಗಿ ಆಡಲು ಬಯಸುವುದು
- ಕರೆದಾಗ ಓಗೊಡದಿರುವುದು / ಉತ್ತರಿಸದಿರುವುದು
- ಯಾವಾಗಲೂ ಶೀತ–ನೆಗಡಿ ಮತ್ತು ಕೆಮ್ಮು
- ನಯನಾಜೂಕಿರುವುದಿಲ್ಲ; ಒರಟುವರ್ತನೆ; ಅಥವಾ ಸಮತೋಲನದ ಸಮಸ್ಯೆಗಳು
- ಬಾಧೆಗೊಳಗಾದ ಕಿವಿಯಲ್ಲಿ ನೋವು ಅಥವಾ ಆಗಾಗ್ಗೆ ಕಿವಿಯ ಸೋಂಕುರೋಗ
- ವಾಕ್, ಭಾಷೆ ಅಥವಾ ಸಾಮಾಜಿಕವಾಗಿ ಬೆರೆಯುವಾಗ ಸಮಸ್ಯೆಗಳು

ಸಾಮಾನ್ಯವಾಗಿ ಈ ಲಕ್ಷಣಗಳನ್ನು ಹಠ, ಒರಟು ಮತ್ತು ತುಂಟಾಟ ಎಂದು ತಪ್ಪಾಗಿ ಗ್ರಹಿಸಲಾಗುತ್ತದೆ. ಇದರಿಂದ, ಸೋರುಗಿವಿಯಿರುವ ಅನೇಕ ಮಕ್ಕಳನ್ನು ತಪ್ಪಾಗಿ ತಿಳಿದುಕೊಳ್ಳಲಾಗುತ್ತದೆ ಅಥವಾ "ಸಮಸ್ಯೆಯ ಮಗು" ಎಂಬ ಪಟ್ಟಿ ಕಟ್ಟಲಾಗುತ್ತದೆ.


ಸೋರುಗಿವಿಯು ತಾತ್ಕಾಲಿಕ ಕಿವುಡುತನವನ್ನು ಉಂಟುಮಾಡಬಲ್ಲದು. ಬಹಳ ದಿನಗಳ ಕಾಲ ಅಲ್ಪಮಟ್ಟದ ಕಿವುಡುತನವಿದ್ದರೂ ಅದು ಮಗುವಿನ ವಾಕ್ ಶಕ್ತಿ ಅಭಿವೃದ್ಧಿಯಾಗುವುದರ ಮೇಲೂ ಪರಿಣಾಮ ಉಂಟುಮಾಡುತ್ತದೆ. ಉದಾಹರಣೆಗೆ, ಪದಗಳ ಕೆಲಭಾಗಗಳನ್ನು ಮಗು ಸರಿಯಾಗಿ ಉಚ್ಚರಿಸುವುದಿಲ್ಲ. ಏನೇ ಆದರೂ, ಮಕ್ಕಳು ಸೋರುಗಿವಿಯಿಂದ ವಾಸಿಯಾದ ಬಳಿಕ ಅವರ ವಾಕ್ ಮತ್ತು ಭಾಷೆಗೆ ಸಂಬಂಧಿಸಿದಂತೆ ಪೂರಕ ಬೆಂಬಲ ಕೊಟ್ಟಲ್ಲಿ, ತಡವಾಗಿಯಾದರೂ ಸರಿಯೇ, ಕಲಿಯಬಲ್ಲರು. ಆದರೆ ಸೋರುಗಿವಿಯಿರುವ ಮಕ್ಕಳಿಗೆ ಹೆಚ್ಚುವರಿ ಬೆಂಬಲ ಸಿಗದಿದ್ದಲ್ಲಿ, ಅವರು ಶಾಲೆಯಲ್ಲಿಯೂ ಹಿಂದುಳಿಯಬಹುದು. ಅಲ್ಲದೆ, ಅಡ್ಡಿ ಒಡ್ಡುವವರೂ, ಭಂಗ ಪಡಿಸುವವರೂ ಆಗಬಲ್ಲರು.

## 5 ಇದಕ್ಕೆ ಎಂತಹ ಚಿಕಿತ್ಸೆಗಳು ಲಭ್ಯವಿವೆ?

ನಿಮ್ಮ ಮಗುವಿನ ಕಿವಿಯ ಬಗ್ಗೆ ನೀವು ಚಿಂತಿತರಾಗಿದ್ದರೆ, ವೈದ್ಯರನ್ನು ನೋಡಿ. ಸಾಧ್ಯವಾದರೆ, ಸ್ಥಳೀಯ ಆಸ್ಪತ್ರೆಯ ಅಥವಾ ವೈದ್ಯಕೀಯ ಕೇಂದ್ರದ ಕಿವಿ, ಮೂಗು ಮತ್ತು ಗಂಟಲು ವಿಭಾಗದ ವೈದ್ಯರನ್ನೇ ನೋಡಿ.

ಐದು ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳನ್ನು ವೈದ್ಯರ ಬಳಿ ಕರೆದುಕೊಂಡು ಹೋಗುವುದಕ್ಕೆ ಸೋರುಗಿವಿ ಮತ್ತು ಸಂಬಂಧಿತ ಸೋಂಕುರೋಗಗಳು ಅತ್ಯಂತ ಸಾಮಾನ್ಯ ಕಾರಣಗಳಾಗಿರುತ್ತವೆ. ಸಾಮಾನ್ಯವಾಗಿ, ಸೋರುಗಿವಿಯ ಜೊತೆ ತೀವ್ರ ಶೀತ–ನೆಗಡಿ ಇದ್ದೇ ಇರುತ್ತದೆ; ಶೀತದಿಂದ ಕಟ್ಟಿಕೊಂಡಿರುವುದು ಬಿಟ್ಟಾಗಷ್ಟೇ ಕಿವಿಯೂ ಸರಿಹೋಗುತ್ತದೆ.

ನಿಮ್ಮ ಮಗುವಿನ ಕಿವಿಗಳನ್ನು ಪರೀಕ್ಷಿಸುವ ವೈದ್ಯರು ಮಗುವಿಗೆ ಸೋರುಗಿವಿ ಇದೆಯೇ ಇಲ್ಲವೇ ಎಂದು ಹೇಳಲು ಸಮರ್ಥರಿರಬೇಕು. ಅವರು ನಿಮ್ಮ ಮಗುವಿನ ಕಿವಿಯ ಪರಿಸ್ಥಿತಿಯನ್ನು ವಿವರಿಸಿ ಹೇಳಬಹುದು ಅಥವಾ ಕಿವಿ ಕಟ್ಟಿಕೊಂಡಿದೆ / ತುಂಬಿಕೊಂಡಿದೆ ಎಂದು ಹೇಳಬಹುದು.








ನಿಮ್ಮ ಮಗು ಕಿವಿ ನೋವು ಎಂದು ಹೇಳಿದರೆ, ವೈದ್ಯರು ನೋವು ನಿವಾರಣೆಗೆ ಯಾವುದಾದರೂ ಔಷಧಿ ಶಿಫಾರಸು ಮಾಡಬಹುದು. ಸೋರುಗಿವಿಗೆ ಆ್ಯಂಟಿಬಯಾಟಿಕ್‌ಗಳನ್ನು ಶಿಫಾರಸು ಮಾಡುವುದಿಲ್ಲ; ಅಷ್ಟೇ ಏಕೆ, ಬಾಲ್ಯದಲ್ಲಿ ಸಾಮಾನ್ಯವಾಗಿ ಕಾಡುವ ಕಿವಿಯ ಸೋಂಕುಗಳಿಗೂ ಆ್ಯಂಟಿಬಯಾಟಿಕ್‌ಗಳನ್ನು ಶಿಫಾರಸು ಮಾಡುವುದಿಲ್ಲ. ಆದ್ದರಿಂದ, ಪರಿಸ್ಥಿತಿ ಹೆಚ್ಚು ಗಂಭೀರವಾಗಿದ್ದರೆ ಮಾತ್ರ, ವೈದ್ಯರು ಔಷಧಿ ಸೂಚಿಸುತ್ತಾರೆ. ನಿಮ್ಮ ಪ್ರದೇಶದಲ್ಲಿ ಕಿವಿಗೆ ಸಂಬಂಧಿಸಿದ ಚಿಕಿತ್ಸಾ ಸೌಲಭ್ಯಗಳಿದ್ದರೆ, ನಿಮ್ಮ ವೈದ್ಯರು ಮಗುವನ್ನು ಕಿವಿಯ ಪರೀಕ್ಷೆಗಾಗಿ ಆಡಿಯಾಲಜಿ ಕ್ಲಿನಿಕ್ಕಿಗೆ, ಕಿವುಡುತನಕ್ಕೆ ಸಂಬಂಧಿಸಿದ ವೃತ್ತಿತಜ್ಞರ ಬಳಿ ಕರೆದುಕೊಂಡು ಹೋಗುವಂತೆ ಸೂಚಿಸಬಹುದು. ಸೋರುಗಿವಿ ಸಾಮಾನ್ಯವಾಗಿ ಯಾವುದೇ ಔಷಧೋಪಚಾರಗಳಿಲ್ಲದೆ ತಾನಾಗಿಯೇ ವಾಸಿಯಾಗಬಲ್ಲದು; ಆದ್ದರಿಂದ ಒಂದು ನಿರ್ದಿಷ್ಟ ಅವಧಿಯವರೆಗೆ ಮಗುವನ್ನು ನಿಗಾದಲ್ಲಿ ಇಡಲಾಗುತ್ತದೆ.

ಒಂದು ವೇಳೆ ಸೋರುಗಿವಿ ಗುಣವಾಗದೇ ಹೋದಲ್ಲಿ, ವೈದ್ಯರು ಸ್ಥಳೀಯ ಆಸ್ಪತ್ರೆಯ ಕಿವಿಯ ತಜ್ಞರ ಬಳಿ ಹೋಗಲು ಸೂಚಿಸಬಹುದು, ನಿಮ್ಮ ಪ್ರದೇಶದಲ್ಲಿ ಆ ಸೌಲಭ್ಯಗಳು ಇದ್ದ ಪಕ್ಷದಲ್ಲಿ. ತಜ್ಞವೈದ್ಯರ ಸೌಲಭ್ಯ ಇಲ್ಲವಾದಲ್ಲಿ, ನೀವು ನಿಮ್ಮ ಅಕ್ಕಪಕ್ಕದ ಜಿಲ್ಲೆ ಅಥವಾ ದೊಡ್ಡ ನಗರಗಳಲ್ಲಿರುವ ತಜ್ಞರನ್ನು ಹುಡುಕಿ ಭೇಟಿಯಾಗಬೇಕು.



# 6 ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಏನಾಗುತ್ತದೆ?




ನಿಮ್ಮ ಮಗುವಿನ ಕಿವಿಗಳನ್ನು ಕಿವಿಯ ತಜ್ಞರು ಪರೀಕ್ಷಿಸುತ್ತಾರೆ. ನಂತರ ಹೆಚ್ಚಿನ ಪರೀಕ್ಷೆಯನ್ನೂ ನಡೆಸಲಾಗುತ್ತದೆ.

ನಿಮ್ಮ ಮಗುವಿಗೆ ಹಲವಾರು ಸಲಹೆಗಳನ್ನು ವೈದ್ಯರು ಸೂಚಿಸಬಹುದು. ಆದರೆ, ಸ್ಥಳೀಯವಾಗಿ ಏನೇನು ಸೌಲಭ್ಯಗಳು ಲಭ್ಯವಿವೆ ಎಂಬುದನ್ನು ಇದು ಅವಲಂಬಿಸುತ್ತದೆ.

ಟಿಂಪ್ಯಾನೋಮೆಟ್ರಿ ಟೆಸ್ಟ್ ಸಹ ಒಂದು.  ಈ ಪರೀಕ್ಷೆಯಲ್ಲಿ ಕಿವಿಯ ತಮಟೆಯು ಎಷ್ಟು ಚೆನ್ನಾಗಿ ಚಲಿಸಬಲ್ಲದು ಎಂಬುದನ್ನು ನೋಡಲಾಗುತದೆ. ನಡುಗಿವಿಯಲ್ಲಿ ದ್ರವವಿದ್ದರೆ, ಕಿವಿಯ ತಮಟೆಯು ಸರಿಯಾಗಿ ಚಲಿಸುವುದಿಲ್ಲ. ಈ ಪರೀಕ್ಷೆಗೆ ಸುಮಾರು ಒಂದು ನಿಮಿಷ ಮಾತ್ರ ಸಾಕು. ಇದು ಸಂಪೂರ್ಣವಾಗಿ ನೋವುರಹಿತವಾದದ್ದು.

ಈ ಪರೀಕ್ಷೆಯ ನಕ್ಷೆಯು (ಗ್ರ್ಯಾಫ್; ಇದನ್ನು ಟಿಂಪ್ಯಾನೋಗ್ರ್ಯಾಮ್ ಎಂದು ಕರೆಯಲಾಗುತ್ತದೆ. ಕೆಳಗಿನ ರೇಖಾಚಿತ್ರ ನೋಡಿ) ಫಲಿತಾಂಶಗಳನ್ನು ನೇರವಾಗಿ ತೋರಿಸುತ್ತದೆ.

**ಟಿಂಪ್ಯಾನೋಗ್ರ್ಯಾಮ್ ಫಲಿತಾಂಶದ ಒಂದು ಉದಾಹರಣೆ:**









ಸೋರುಗಿವಿಯು ನಿಮ್ಮ ಮಗುವಿನ ಶ್ರವಣಶಕ್ತಿಯ ಮೇಲೆ ಪರಿಣಾಮ ಬೀರಿರುವುದೇ; ಹಾಗಿದ್ದಲ್ಲಿ ಎಷ್ಟರ ಮಟ್ಟಿಗೆ ಆಗಿದೆ  ಎಂಬುದನ್ನು ನೋಡಲು ಶ್ರವಣಶಕ್ತಿಯ ಪರೀಕ್ಷೆಯನ್ನು ಸಹ ನಡೆಸಬೇಕಾಗುತ್ತದೆ. ಈ ಪರೀಕ್ಷೆಗಳು ಮಗುವಿನ ವಯಸ್ಸನ್ನು ಆಧರಿಸಿರುತ್ತವೆ.

ಒಟ್ಟಿನಲ್ಲಿ ನಿಮ್ಮ ಮಗುವಿಗೆ ಏನೇನು ಪರೀಕ್ಷೆಗಳನ್ನು ನಡೆಸಲಾಗುತ್ತದೋ, ಅವುಗಳ ಫಲಿತಾಂಶಗಳನ್ನು ಕಿವಿಯ ತಜ್ಞವೈದ್ಯರು ನಿಮಗೆ ವಿವರಿಸಿ ಹೇಳಬೇಕು; ಅಲ್ಲದೆ, ಮಗುವಿಗೆ ಉತ್ತಮ ರೀತಿಯ ಔಷಧೋಪಚಾರ ಕೊಡುವ ಬಗ್ಗೆ ನಿಮ್ಮೊಂದಿಗೆ ಚರ್ಚಿಸಬೇಕು.

ಟಿಂಪ್ಯಾನೋಮೆಟ್ರಿ ಮತ್ತು ಶ್ರವಣಶಕ್ತಿಯ ಪರೀಕ್ಷಾ ಸೌಲಭ್ಯಗಳು ನಗರಗಳಲ್ಲಿ ಲಭ್ಯವಿರುತ್ತವೆ. ಆದರೆ ಈ ಪರೀಕ್ಷೆಗಳಿಗೆ ತಗುಲುವ ವೆಚ್ಚದಲ್ಲಿ ವ್ಯತ್ಯಾಸವಿರುತ್ತದೆ – ಅಂದರೆ, ಸರ್ಕಾರಿ ಆಸ್ಪತ್ರೆಯೋ ಅಥವಾ ಖಾಸಗಿ ಆಸ್ಪತ್ರೆಯೋ ಎಂಬುದನ್ನು ಅವಲಂಬಿಸುತ್ತದೆ.



# 7 ಗ್ರಾಮೆಟ್ಸ್




ನಿಮ್ಮ ಮಗುವಿನ ಸೋರುಗಿವಿ ತಾನಾಗಿಯೇ ಸರಿಯಾಗದಿದ್ದಲ್ಲಿ, ಆ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸಹಾಯವಾಗುವಂತೆ ವೈದ್ಯರು ಬೇರೆ ಕೆಲವು ಉಪಚಾರ ಕ್ರಮಗಳನ್ನು ಒದಗಿಸಬಹುದು. ಇವುಗಳನ್ನು ಎಲ್ಲಾ ಮಕ್ಕಳಿಗೆ ಒದಗಿಸುವುದಿಲ್ಲ; ಅಲ್ಲದೆ, ಅದು ಪರಿಸ್ಥಿತಿಯ ಗಂಭೀರತೆ ಹಾಗೂ ಆಯಾ ಪ್ರದೇಶಗಳಲ್ಲಿ ಆ ಉಪಚಾರ ಕ್ರಮಗಳ ಲಭ್ಯತೆಯನ್ನು ಅವಲಂಬಿಸುತ್ತದೆ.

ಗ್ರಾಮೆಟ್ಸ್ ಎಂದರೆ ಕಿರಿದಾದ ಪ್ಲಾಸ್ಟಿಕ್ ನಾಳಗಳು. ಇವುಗಳನ್ನು ಆಸ್ಪತ್ರೆಯಲ್ಲಿ ನಡೆಸುವ ಒಂದು ಸಣ್ಣ ಶಸ್ತ್ರಚಿಕಿತ್ಸೆ ಮೂಲಕ ಕಿವಿಯ ತಮಟೆಯೊಳಗೆ ಇರಿಸಲಾಗುತ್ತದೆ. ಇದನ್ನು ಸಾಮಾನ್ಯ ಅರಿವಳಿಕೆ ನೀಡಿ ನಡೆಸಲಾಗುತ್ತದೆ. ನಡುಗಿವಿಯೊಳಗಿನ ದ್ರವವು ಸಂಪೂರ್ಣವಾಗಿ ಬರಿದಾದ ಮೇಲೆ ಈ ನಾಳಗಳನ್ನು ತೂರಿಸಲಾಗುತ್ತದೆ. ಗ್ರಾಮೆಟ್‌ಗಳು ನಡುಗಿವಿಯಲ್ಲಿ ಗಾಳಿಯ ಸಂಚಾರಕ್ಕೆ ಅನುವು ಮಾಡಿಕೊಡುತ್ತದೆ; ಮತ್ತು, ದ್ರವವು ಇನ್ನೂ ಹೆಚ್ಚು ಸೇರಿಕೊಳ್ಳುವುದನ್ನು ನಿಲ್ಲಿಸುತ್ತದೆ.

ಗ್ರಾಮೆಟ್ಸ್ ಸಾಮಾನ್ಯವಾಗಿ ಕಿವಿಯ ತಮಟೆಯು ಗುಣಹೊಂದಿ, ಹೊರತಳ್ಳಲ್ಪಡುವವರೆಗೂ ಇರುತ್ತವೆ. ಕೆಲವೊಮ್ಮೆ ದ್ರವವು ಮತ್ತೆ ಸೇರಿಕೊಳ್ಳುತ್ತದೆ. ಆಗ ಮತ್ತೊಂದು ಗ್ರಾಮೆಟ್ ಚಿಕಿತ್ಸೆ ಮಾಡುವ ಬಗ್ಗೆ ಪರಿಗಣಿಸಬೇಕಾಗುತ್ತದೆ. ಮಗುವಿಗೆ ಮತ್ತೊಂದು ಶಸ್ತ್ರಚಿಕಿತ್ಸೆ ನಡೆಸುವ ಬಗ್ಗೆ ನೀವು ನಿರ್ಧಾರ ತೆಗೆದುಕೊಳ್ಳುವುದಕ್ಕೂ ಮುಂಚೆ ನಿಮ್ಮ ವೈದ್ಯರು ಮತ್ತೆ ಶಸ್ತ್ರಚಿಕಿತ್ಸೆ ನಡೆಸುವುದಕ್ಕೆ ಸಂಬಂಧಿಸಿದಂತೆ ಏನಾದರೂ ಅಪಾಯ ಸಾಧ್ಯತೆಗಳಿದ್ದರೆ, ಅವುಗಳ ಬಗ್ಗೆ ಯಾವಾಗಲೂ ನಿಮ್ಮೊಂದಿಗೆ ಚರ್ಚಿಸಬೇಕು.







### ಅ್ಯಡಿನಾಯ್ಡ್‌ಗಳನ್ನು ತೆಗೆಯುವುದು

ನಿಮ್ಮ ಮಗುವಿನ ಕಿವಿಯಲ್ಲಿ ಗ್ರಾಮೆಟ್‌ಗಳನ್ನು ತೂರಿಸುವ ಸಮಯದಲ್ಲಿಯೇ ಅ್ಯಡಿನಾಯ್ಡ್‌ಗಳನ್ನು ತೆಗೆದುಹಾಕುವ ಬಗ್ಗೆ ಶಸ್ತ್ರವೈದ್ಯರು ನಿಮ್ಮೊಂದಿಗೆ ಮಾತನಾಡಬಹುದು. ಅ್ಯಡಿನಾಯ್ಡ್‌ಗಳೆಂದರೆ ಕಿವಿಯನಾಳದ ಕೊನೆಯಲ್ಲಿರುವ ಗ್ರಂಥಿಗಳು. ಇವು ಕೆಲಬಾರಿ ಸೋಂಕಿಗೆ ಈಡಾಗಿ, ಊದಿಕೊಂಡು, ನಾಳದ ತುದಿಯಲ್ಲಿ ತಡೆ ಒಡ್ಡುತ್ತವೆ.

### ಗ್ರಾಮೆಟ್‌ಗಳನ್ನು ಕಿವಿಯಲ್ಲಿ ತೂರಿಸಿರುವಾಗ, ಈಜುವುದು ಮತ್ತು ಸ್ನಾನ ಮಾಡುವುದು



ಕಿವಿಗಳನ್ನು ಮೊದಲ 2–4 ವಾರಗಳವರೆಗೆ ಶುಷ್ಕವಾಗಿರುವಂತೆ, ನೀರು ಬೀಳದಂತೆ ನೋಡಿಕೊಳ್ಳಬೇಕು ಎಂದು ವೈದ್ಯರು ಹೇಳುತ್ತಾರೆ. ಇದಾದ ನಂತರ ಗ್ರಾಮೆಟ್‌ಗಳನ್ನು ಹೊಂದಿರುವಂತಹ ಅನೇಕ ಮಕ್ಕಳಿಗೆ ಯಾವುದೇ ವಿಶೇಷ ಮುಂಜಾಗ್ರತಾ ಕ್ರಮ ಅನುಸರಿಸಬೇಕಾದ ಅಗತ್ಯವಿರುವುದಿಲ್ಲ. ಅವರು ಗ್ರಾಮೆಟ್‌ಗಳನ್ನಿಟ್ಟುಕೊಂಡೇ ಈಜಬಹುದು ಮತ್ತು ಸ್ನಾನ ಮಾಡಬಹುದು. ಆದರೂ ಕೆಲವೊಂದು ಮಕ್ಕಳಿಗೆ ನೀರು ಕಿವಿಯೊಳಗೆ ಸೇರಿ ಸೋಂಕು ತಗುಲುವ ಸಾಧ್ಯತೆ ಇರುತ್ತದೆ. ನಿಮ್ಮ ಮಗು ಅಂತಹ ಮಕ್ಕಳ ಪೈಕಿಯದಾಗಿದ್ದರೆ, ವೈದ್ಯರು ಕೆಲವು ಮುಂಜಾಗ್ರತಾ ಕ್ರಮಗಳನ್ನು ಸೂಚಿಸಬಹುದು.

! ನಿಮ್ಮ ಮಗು ನೀರಿನೊಳಗೆ ಮುಳುಗದಂತೆ ಅಥವಾ ಜಿಗಿಯದಂತೆ ನೋಡಿಕೊಳ್ಳಿ. ಏಕೆಂದರೆ ಇದರಿಂದ ಹೊರಗಿನ ಒತ್ತಡ ಏರಿಕೆಯಾಗಿ, ಅದರ ಪರಿಣಾಮವಾಗಿ ನೀರು ಗ್ರಾಮೆಟ್‌ಗಳ ಮೂಲಕ ನಡುಗಿವಿಗೆ ನುಗ್ಗುತ್ತದೆ.

! ನಿಮ್ಮ ಮಗು ಕೆರೆ – ಕೊಳಗಳಲ್ಲಿ ಈಜದಂತೆ ನೋಡಿಕೊಳ್ಳಿ. ಈ ನೀರಿನಲ್ಲಿ ಸಾಮಾನ್ಯವಾಗಿ ಬ್ಯಾಕ್ಟೀರಿಯಾಗಳು ಅಧಿಕ ಪ್ರಮಾಣದಲ್ಲಿರುತ್ತವೆ. ಹೀಗಾಗಿ ಸೋಂಕು ತಗುಲುವ ಸಾಧ್ಯತೆಯೂ ಹೆಚ್ಚು.

! ನಿಮ್ಮ ಮಗುವಿಗೆ ತಲೆಗೆ ಸ್ನಾನ ಮಾಡಿಸುವಾಗ / ಕೂದಲು ತೊಳೆಯುವಾಗ, ಎಚ್ಚರಿಕೆಯಿಂದಿರಿ. ಸಾಬೂನಿನ ನೀರು ಸುಲಭವಾಗಿ ಗ್ರಾಮೆಟ್‌ಗಳ ಮೂಲಕ ಹಾದು ನಡುಗಿವಿಯನ್ನು ತಲುಪಬಲ್ಲದು. ನೀರು ಗಲೀಜಾಗಿದ್ದರಂತೂ, ಸೋಂಕು ಉಂಟುಮಾಡಬಲ್ಲದು. ಆದ್ದರಿಂದ ಈ ಸಂದರ್ಭದಲ್ಲಿ, ಮಗುವಿನ್ನು ನೇರವಾಗಿ ಕೂರಿಸಿ. ಮೈಗೆ ಸ್ನಾನ ಮಾಡಿಸುವ ಮೊದಲು ಮಗುವಿನ ಕೂದಲನ್ನು ತೊಳೆಯಿರಿ. ಅದಕ್ಕಾಗಿ, ತಲೆಯನ್ನು ಹಿಂದಕ್ಕೆ ಬಾಗಿಸಿ, ಸ್ವಚ್ಛ ನೀರಿನಿಂದ ಕೈಯಾಡಿಸುತ್ತ ತೊಳೆಯಿರಿ.

ಅಭಿವೃದ್ಧಿಶೀಲ ದೇಶಗಳಲ್ಲಿ, ಗ್ರಾಮೆಟ್‌ಗಳು ಮತ್ತು ಅ್ಯಡಿನಾಯ್ಡ್‌ಗಳನ್ನು ತೆಗೆದುಹಾಕುವ ಕೆಲಸವನ್ನು ಕಿವಿ–ಮೂಗು–ಗಂಟಲು ತಜ್ಞರು ನಿಯಮಿತವಾಗಿ ಮಾಡುತ್ತಾರೆ. ಅದಕ್ಕೆ ತಗುಲುವ ವೆಚ್ಚ ಅದು ಸರ್ಕಾರಿ ಆಸ್ಪತ್ರೆಯೋ ಅಥವಾ ಖಾಸಗಿಯದೋ ಎಂಬುದನ್ನು ಅವಲಂಬಿಸುತ್ತದೆ.

# 8 ಓಟೋವೆಂಟ್

ಓಟೋವೆಂಟ್ ಎನ್ನುವುದು ಒಂದು ಬಲೂನು ಮತ್ತು ಮೂಗಿನ ಉಪಕರಣವನ್ನು ಒಳಗೊಂಡಂತಹ ಒಂದು ಸಾಧನ. ಇದನ್ನು ಕಿವಿಯ ನಾಳವನ್ನು ಪ್ರಚೋದಿಸುವುದಕ್ಕಾಗಿ ವಿನ್ಯಾಸಗೊಳಿಸಲಾಗಿದೆ. ಇದರ ಮೂಲಕ ನೀಡುವ ಚಿಕಿತ್ಸೆ ಹೀಗಿರುತ್ತದೆ: ಮೊದಲು ಬಲೂನನ್ನು ಮೂಗಿನ ಉಪಕರಣಕ್ಕೆ ಜೋಡಿಸಬೇಕು. ನಂತರ ಮೂಗಿನ ಉಪಕರಣವನ್ನು ಒಂದು ಹೊಳ್ಳೆಗೆ ಜೋಡಿಸಬೇಕು. ಮತ್ತೊಂದು ಹೊಳ್ಳೆ ಮತ್ತು ಬಾಯಿಯನ್ನು ಮುಚ್ಚಿರಬೇಕು. ಈಗ ಬಲೂನು ದ್ರಾಕ್ಷಿಯ ಗಾತ್ರಕ್ಕೆ ಹಿಗ್ಗುವವರೆಗೆ ಮಗು ಒಂದು ಹೊಳ್ಳೆಯ ಮೂಲಕ ಬಲೂನನ್ನು ಊದಬೇಕು. ಇದರಿಂದ ಉಂಟಾಗುವ ಒತ್ತಡದಿಂದ ಕಿವಿಯನಾಳ ತೆರೆದುಕೊಳ್ಳುತ್ತದೆ; ಈ ಮೂಲಕ ಒಳಗಿವಿಯಲ್ಲಿರುವ ದ್ರವ ಬರಿದಾಗುತ್ತದೆ.

ಮಕ್ಕಳಿಗೆ ಇದು ಒಂದು ಕಷ್ಟಕರವಾದ ಕೆಲಸವೇ. ಬಹಳ ಎಳೆಯ ಮಕ್ಕಳಿಗಂತೂ ಇದು ಸೂಕ್ತವಲ್ಲ. ಓಟೋವೆಂಟ್ ಪ್ರಕ್ರಿಯೆಯು ಸೋರುಗಿವಿ ಸರಿಹೋಗುವ ಅಥವಾ ಗ್ರಾಮೆಟ್ ಶಸ್ತ್ರಚಿಕಿತ್ಸೆಯ ನಿರೀಕ್ಷೆಯಲ್ಲಿರಬಹುದಾದ ಕೆಲ ದೊಡ್ಡ ಮಕ್ಕಳಿಗೆ ಸಹಾಯಕವಾಗಬಲ್ಲದು. ಈ ಉಪಚಾರವು ಶಸ್ತ್ರಚಿಕಿತ್ಸೆಯ ಸಾಧ್ಯತೆಯನ್ನು ತಗ್ಗಿಸಬಹುದು. ನಿಮ್ಮ ದೇಶದಲ್ಲಿ ಓಟೋವೆಂಟ್ ಚಿಕಿತ್ಸೆ ಲಭ್ಯವಿದೆಯೆ ಎಂಬ ಬಗ್ಗೆ ನಿಮ್ಮ ವೈದ್ಯರನ್ನು ವಿಚಾರಿಸಿ – ಅದು ನಿಮ್ಮ ಮಗುವಿಗೆ ಸೂಕ್ತವೇ ಎಂಬುದನ್ನೂ ಕೇಳಿ ತಿಳಿದುಕೊಳ್ಳಿ.




Photo by www.otovent.co.uk






# 9 ಶ್ರವಣ ಸಾಧನಗಳು

ಸೋರುಗಿವಿ ತಾನಾಗಿಯೇ ಸರಿಹೋಗುವ ನಿರೀಕ್ಷೆಯಲ್ಲಿ ಅನೇಕ ಮಕ್ಕಳು ಕಾಯುತ್ತಿರುತ್ತಾರೆ. ಅಥವಾ ಗ್ರಾಮೆಟ್ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಬೇಕೆಂದು ಕೆಲವು ಮಕ್ಕಳು ಕಾಯುತ್ತಿರುತ್ತಾರೆ. ಆದರೆ ಈ ಕಾಯುವಿಕೆಯ ದೀರ್ಘ ಸಮಯದಲ್ಲಿ ಮಕ್ಕಳ ಶ್ರವಣ ಸಾಮರ್ಥ್ಯ ಕುಂದಬಹುದು. ಈ ಸಮಯದಲ್ಲಿ ಮಗುವಿನ ವಾಕ್ ಮತ್ತು ಶಿಕ್ಷಣಕ್ಕೆ ಏನೂ ಬಾಧಕವಾಗದಂತೆ ನೋಡಿಕೊಳ್ಳಬೇಕಾದ್ದು ಮುಖ್ಯ. ಹೀಗಾಗಿ, ಶ್ರವಣ ಸಾಧನಗಳನ್ನು ಅಳವಡಿಸುವ ಬಗ್ಗೆ ಅಥವಾ ಶಾಲೆಯಲ್ಲಿ ಹೆಚ್ಚುವರಿ ಬೆಂಬಲ ಕೇಳುವ ವಿಷಯವನ್ನು ನೀವು ಪರಿಗಣಿಸಬಹುದು.

ಮಕ್ಕಳು ಹೊಂದಿರಬಹುದಾದಂತಹ ಕಿವುಡುತನ ಯಾವುದೇ ಹಂತದ್ದಾಗಿರಲಿ – ಶ್ರವಣ ಸಾಧನಗಳು ಅವರಿಗೆ ಪ್ರಯೋಜನಕಾರಿಯಾಗಬಲ್ಲದು. ಸೋರುಗಿವಿಯಿರುವ ಮಕ್ಕಳಿಗೆ ಸೂಕ್ತವಾದಂತಹ ಬೇರೆ ಬೇರೆ ವಿಧಗಳ ಶ್ರವಣ ಸಾಧನಗಳು ಲಭ್ಯವಿವೆ. ಹೆಚ್ಚಿನ ಶ್ರವಣ ಸಾಧನಗಳ ಕೆಲಸವೇ ಕಿವಿಯೊಳಗೆ ಹೋಗುವ ಶಬ್ದವನ್ನು ಹೆಚ್ಚಿಸುವುದಾಗಿರುತ್ತದೆ. ಅನೇಕ ಮಕ್ಕಳು ಒಂದೊಂದು ಕಿವಿಯ ಹಿಂದೆಯೂ ಧರಿಸಬಹುದಾದಂತಹ ಸಾಧನಗಳನ್ನು ಉಪಯೋಗಿಸುತ್ತಾರೆ. ಒಬ್ಬ ಪರಿಣಿತ ವೃತ್ತಿತಜ್ಞರೇ ಆ ಶ್ರವಣ ಸಾಧನಗಳು ಮಗುವಿಗೆ ಸೂಕ್ತವೇ ಎಂಬುದನ್ನು ಖಚಿತ ಮಾಡಿಕೊಂಡೇ ಅಳವಡಿಸಬೇಕು.



# 10 ನನ್ನ ಮಗುವಿಗೆ ಸುಲಭವಾಗಿ ಕಿವಿ ಕೇಳಿಸುವಂತಾಗಲು ನಾನೇನು ಮಾಡಬೇಕು?

ಸೋರುಗಿವಿಯನ್ನು ಸಾಧ್ಯವಾದಷ್ಟು ಬೇಗನೆ ಕಂಡುಹಿಡಿಯಬೇಕಾದ್ದು ಬಹಳ ಮುಖ್ಯ. ಅದು ಮಗುವಿನ ಶ್ರವಣ ಸಾಮರ್ಥ್ಯದ ಮೇಲೆ ಯಾವ ರೀತಿ ಪರಿಣಾಮ ಬೀರಬಹುದೆಂಬುದನ್ನು ಪೋಷಕರು ಮತ್ತು ಶಿಕ್ಷಕರು ಸಹ ತಿಳಿದುಕೊಳ್ಳಬೇಕಾದ್ದು ಅತಿ ಅವಶ್ಯಕ. ಪ್ರಾಥಮಿಕ ಸಂವಹನದಲ್ಲಿನ ಉಪಾಯಗಳನ್ನು ಅನುಸರಿಸಿದರೆ, ನಿಮ್ಮ ಮಗು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆ. ಉದಾ:

- ನೀವು ಮಾತನಾಡುವುದಕ್ಕೆ ಆರಂಭಿಸುವ ಮೊದಲೇ ನಿಮ್ಮ ಮಗುವಿನ ಗಮನವನ್ನು ಸೆಳೆಯುವುದು – ಕೈಯಾಡಿಸುವುದು ಅಥವಾ ಅವರ ಭುಜವನ್ನು ಮೆಲ್ಲಗೆ ತಟ್ಟುವುದು
- ನೀವು ಸಾಧ್ಯವಾದಷ್ಟು ಮಟ್ಟಿಗೆ ಮಗುವಿನ ಎದುರಿಗೇ ಇರತಕ್ಕದ್ದು. ಮಗುವಿನ ದೃಷ್ಟಿ ಸಂಧಿಸಿಯೇ ಅದರೊಂದಿಗೆ ಮಾತನಾಡಬೇಕು.
- ಮಗುವಿಗೆ ನಿಮ್ಮ ಮುಖ ಸ್ಪಷ್ಟವಾಗಿ ಕಾಣುವುದಕ್ಕೆ ಆಗುವಂತೆ ಅಲ್ಲಿ ಸಾಕಷ್ಟು ಬೆಳಕಿರಬೇಕು.
- ಯಾವ ವಿಷಯ ಮಾತನಾಡುತ್ತಿದ್ದೀರಿ ಎಂಬುದನ್ನು ನಿಮ್ಮ ಕೈಗಳಿಂದ ತೋರಿಸುತ್ತ ಮಾತನಾಡಬೇಕು.
- ಹಿನ್ನೆಲೆಯಲ್ಲಿನ ಶಬ್ದ ಕನಿಷ್ಠ ಮಟ್ಟದಲ್ಲಿರುವುದೇ ಎಂದು ಗಮನಿಸಬೇಕು.



- ಸಹಜವಾಗಿ ಮಾತನಾಡಬೇಕು – ಬಹಳ ಮೆಲ್ಲಗೂ ಅಲ್ಲ, ಬಹಳ ಜೋರಾಗಿಯೂ ಅಲ್ಲ.

ನಿಮ್ಮ ಮಗುವಿನ ಶಿಕ್ಷಕರಿಗೆ ಮಗುವಿಗೆ ಏನೋ ತೊಂದರೆಯಾಗುತ್ತಿದೆ ಎಂದು ಅನ್ನಿಸಬಹುದು; ಆದರೆ ಅದು ಕಿವಿಗೆ ಸಂಬಂಧಿಸಿದ್ದು ಎನ್ನುವುದು ಗೊತ್ತಾಗದೇ ಇರಬಹುದು. ನೀವು ಮಗುವಿನ ಶಿಕ್ಷಕರಿಗೆ ನಿಮ್ಮ ಮಗುವಿನ ಶ್ರವಣ ಸಾಮರ್ಥ್ಯದ ಬಗ್ಗೆ ತಿಳಿಸಬೇಕು – ಆಗ ಮಗುವಿಗೆ ಸಹಾಯವಾಗುವಂತಹ ವ್ಯವಸ್ಥೆಯನ್ನು ಶಾಲೆಯಲ್ಲಿ ಮಾಡಬಹುದು. ಮಗುವು ತರಗತಿಯಲ್ಲಿ ಶಿಕ್ಷಕರ ಎದುರಿಗೇ ಕುಳಿತುಕೊಳ್ಳುವುದು ಬಹಳ ಮುಖ್ಯ; ಆಗ ಮಗುವಿಗೆ ಶಿಕ್ಷಕರು ಹೇಳುವುದು ಅರ್ಥವಾಗುತ್ತದೆ. ಇದರಿಂದ, ಕೇಳಿದ ಪ್ರಶ್ನೆಯನ್ನೇ ಮತ್ತೆ ಮತ್ತೆ ಕೇಳಿ ಮುಜುಗರಕ್ಕೊಳಗಾಗುವ ಪ್ರಮೇಯ ಬರುವುದಿಲ್ಲ.



